**ದಿ:-11-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ಎದುರುದಾರರು ನಂ.1, 2, 4, 5(ಎ), (ಬಿ) ಮತ್ತು (ಸಿ) ಪರ ಶ್ರೀ. ವಿ.ಆರ್.ಬಿ ವಕೀಲರಿಂದ :**

1. ಚಿಕ್ಕಬೋರಣ್ಣ ಅಲಿಯಾಸ್ ಬಳಿಶೆಟ್ಟಪ್ಪ ನನ್ನ ಅಜ್ಜನಾಗಿರುತ್ತಾರೆ. ಅವರು ದಿನಾಂಕ 18.09.1984 ರಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ಅವರು ತೀರಿಹೋದ ನಂತರ ದಿನಾಂಕ 05.10.1984 ರಂದು ಅವರ ಹೆಂಡತಿಯಂದಿರು, ಅವರ ಮಕ್ಕಳು ಮತುತ ಮೊಮ್ಮಕ್ಕಳು ಸೇರಿ ಕುಟುಂಬದ ಸ್ವತ್ತನ್ನು ತಮ್ಮೊಳಗೆ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ದಿನಾಂಕ ನನಗೆ ನೆನಪಿಲ್ಲ ಆದರೆ ವಿಭಾಗ ಮಾಡಿಕೊಂಡಿದ್ದಾರೆ. ಈ ವಿಭಾಗ ಮಾಡಿಕೊಳ್ಳುವ ಸಂದರ್ಭದಲ್ಲಿ ನಾನು ಮತ್ತು ನನ್ನ ಸಹೋದರ ಸಹೋದರಿಯರು ಅದಾಗಲೇ ಹುಟ್ಟಿದ್ದೆವು ಎಂದರೆ ಸರಿ. ಆ ವಿಭಾಗ ಪತ್ರದಲ್ಲಿ ನಮೂದಿಸಿದ ರಂಗಮ್ಮ ನನ್ನ ಅಜ್ಜಿ ಎಂದರೆ ಸರಿ. ಅದರಲ್ಲಿ ನಮೂದಿಸಿದ ಗಂಗಬೋರಮ್ಮ ಎನ್ನುವವರು ನನ್ನ ತಂದೆಯ ಅಕ್ಕ ಎಂದರೆ ನನಗೆ ಗೊತ್ತಿಲ್ಲ.

2. 1984 ರ ವಿಭಾಗ ಪತ್ರವನ್ನು ನಾನು ಸಂಪೂರ್ಣವಾಗಿ ನಾನು ಓದಿ ತಿಳಿದುಕೊಂಡಿರುವುದಿಲ್ಲ. ಅದರಲ್ಲಿ ಬೋರೇಗೌಡರ ಹೆಂಡತಿ ಜಯಮ್ಮರವರು ಸಹ ಪಕ್ಷಗಾರರು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಬೋರೇಗೌಡರ ಮಗ ಮುನಿಕರಿಯಪ್ಪ ಕೂಡ ಪಕ್ಷಗಾರರು ಎಂದರೆ ನಾನು ವಿಭಾಗ ಪತ್ರವನ್ನು ಸಂಪೂರ್ಣವಾಗಿ ಓದಿ ತಿಳಿದುಕೊಳ್ಳದ ಕಾರಣ ನನಗೆ ಆ ಬಗ್ಗೆ ಸರಿಯಾಗಿ ಗೊತ್ತಿಲ್ಲ.

ವಿಭಾಗ ಪತ್ರದಲ್ಲಿ ನನ್ನ ತಂದೆಯವರು 4 ನೇ ಪಕ್ಷಗಾರರು ಎಂದರೆ ಅವರಿಗೆ ಆಸ್ತಿ ಬಂದಿರುತ್ತದೆ ಎಂಬುದು ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಒಟ್ಟು 13 ಆಸ್ತಿಗಳು ವಿಭಾಗ ಪತ್ರದ ಬಿ ತಪಸೀಲಿನ ಮುಖಾಂತರ ಬಂದಿದೆ ಎಂದರೆ ನನ್ನ ತಂದೆಗೆ ಆಸ್ತಿ ಬಂದಿರುತ್ತದೆ ಆದರೆ ಎಷ್ಟು ಎಂದು ನನಗೆ ಗೊತ್ತಿಲ್ಲ.

ನಿ.ಪಿ.2 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ 6 ಐಟಂಗಳಾದ ಖಾತಾ ನಂ.9/4, 9/9, 9/11, 9/1, 9/22 ಮತ್ತು 36/4 ಇವುಗಳು 1984 ರ ವಿಭಾಗ ಪತ್ರದ ಮೂಲಕ ನನ್ನ ತಂದೆಗೆ ಬಂದ ಆಸ್ತಿಗಳು ಎಂದರೆ ನನಗೆ ಅದರ ಬಗ್ಗೆ ಅಷ್ಟು ಮಾಹಿತಿ ಇಲ್ಲ, ನಿ.ಪಿ.2 ನ್ನು ನನ್ನ ತಂದೆಯವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಈ 6 ಆಸ್ತಿಗಳು ನನ್ನ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ. ನನ್ನ ತಂದೆಗೆ ಈ ಆಸ್ತಿಗಳು ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ವಿಭಾಗ ಪತ್ರ ಮಾಡುವ ಸಂದರ್ಭದಲ್ಲಿ ನನ್ನ ಅಜ್ಜ ಬದುಕಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. 1984 ರಲ್ಲಿ ನನಗೆ ಸುಮಾರು 14 ವಯಸ್ಸಾಗಿರಬಹುದು.

ನಾನು ದಿನಾಂಕ 05.10.1984 ರ ವಿಭಾಗ ಪತ್ರವನ್ನು ಪ್ರಶ್ನಿಸಿ ಎಲ್ಲಿಯೂ ಪ್ರಕರಣವನ್ನು ಹೂಡಿಲ್ಲ. ನಿ.ಪಿ.1 ರಲ್ಲಿ 6 ಆಸ್ತಿಗಳಿದ್ದು ಅವುಗಳು ನನ್ನ ತಂದೆಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ ತಂದೆಗೆ ಗೊತ್ತಿರುತ್ತದೆ. ಮರಣ ಶಾಸನವನ್ನು ಯಾವಗ, ಎಲ್ಲಿ ಮತ್ತು ಯಾವ ಸಮಯದಲ್ಲಿ ಸಿಕ್ಕಿರುತ್ತದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ.

ನನ್ನ ತಂದೆಯವರು ತೀರಿಹೋದ ದಿನದಿಂದ 11 ವರ್ಷಗಳ ಕಾಲ ಮರಣ ಶಾಸನವು ಎಲ್ಲಿತ್ತು ಮತ್ತು ಅದು ಏನಾಗಿತ್ತು ಎಂಬ ಬಗ್ಗೆ ವಾದ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ.

ಡಿಸೆಂಬರ್ 2014 ರಲ್ಲಿ ನನ್ನ ಹೆಂಡತಿ ಗುಣಶೀಲರ ವಿಚಾರದಲ್ಲಿ ಮನೆಯಲ್ಲಿ ತಕರಾರು ಆಗಿತ್ತು ಎಂದರೆ ಈ ವಿಷಯಕ್ಕೂ ಈ ದಾವೆಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಇದುವೇ ಸಾಕ್ಷಿಯು ಚುನಾವಣೆಯ ಸಂದರ್ಭದಲ್ಲಿ ಮುನಿಸಿಪಾಲಿಟಿಗೆ ನೀಡಿರುವ ದಾಖಲೆ ಎಂದು ಕೇಳಲಾಗಿ ಸಾಕ್ಷಿಯು ಈ ದಾಖಲೆಗೂ ಈ ದಾವೆಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಆ ದಾಖಲೆಯನ್ನು ತೋರಿಸಿ ಅದು ತಮ್ಮ ಪ್ರಮಾಣ ಪತ್ರ ಹೌದೋ ಅಲ್ಲವೋ ಎಂದು ನೋಡಿ ಹೇಳಿ ಎಂದು ಕೇಳಲಾಗಿ ಈ ದಾಖಲೆಗೂ ಈ ದಾವೆಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ಮದುವೆಯ ಪ್ರಮಾಣ ಪತ್ರವನ್ನು ತೋರಿಸಿ ಇದು ನಿಮ್ಮ ಮದುವೆಯ ಪ್ರಮಾಣ ಪತ್ರ ಹೌದೋ ಅಲ್ಲವೋ ಎಂದು ಕೇಳಲಾಗಿ ಸಾಕ್ಷಿಯು ಈ ದಾಖಲೆಗೂ ಈ ದಾವೆಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 23.03.2015 ರ ಮದುವೆಯ ಪ್ರಮಾಣ ಪತ್ರವನ್ನು ತೋರಿಸಿ ಇದು ನಿಮ್ಮ ಮದುವೆಯ ನೊಂದಣಿ ಪ್ರಮಾಣ ಪತ್ರವೇ ಎಂದು ಕುರಿತಾಗಿ ದಿನಾಂಕಗಳೊಂದಿಗೆ ಕೇಳಲಾಗಿ ಸಾಕ್ಷಿಯು ಆ ದಾಖಲೆಯನ್ನು

ನೋಡಲು ನಿರಾಕರಿಸಿ ಈ ದಾಖಲೆಗೂ ಈ ದಾವೆಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಈ ದಾಖಲೆಯನ್ನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ ದಾಖಲೆ ಎಂದರೆ ಸಾಕ್ಷಿಯು ಈ ದಾಖಲೆಗೂ ಈ ದಾವೆಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**